ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಿಂದ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 25.

ಮೃತಪಟ್ಟ ಚಿಕ್ಕಮಗಳೂರು ತಾಲ್ಲೂಕು ಅರಿಷಣಗುಪ್ಪೆ ಚನ್ನೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಅರಿಷಣಗುಪ್ಪೆ ಹೆಬ್ಬಳ್ಳಿ ನಂಜೇಗೌಡನು, ಮೃತಪಟ್ಟ ಚನ್ನೇಗೌಡನಿಗೆ ಅಂಣನಾಗಬೇಕೆಂಬ ಹಕ್ಕುದಾರೀ ಮೇಲೆ ಅರಿಷಣಗುಪ್ಪೆ ನಂಜೇಗೌಡನು, ಅರಿಷಣಗುಪ್ಪೆ ವಾಸಸ್ಥನಾಗಿ ಮೃತಪಟ್ಟ ಚನ್ನೇಗೌಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜೇಗೌಡನ ಅರ್ಜೀಯನ್ನು 1884ನೇ ಇಸವೀ ಏಪ್ರಿಲ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನೇಗೌಡನ ಆಸ್ತಿಗೆ ಹಕ್ಕುದಾರರಾದವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಮಾರ್ಚೀ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ನಂಬರ್ 27.

ಮೃತಪಟ್ಟ ಬೇಲೂರು ತಾಲ್ಲೂಕು ಅರೇಹಳ್ಳಿ ಪೇಟೆ ರುದ್ರಪ್ಪಶೆಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಬೆಂಣೇ ಕಲ್ಯಾಣಪ್ಪಶೆಟ್ಟಿ ಮಗ ಶಾಂತವೀರಪ್ಪಶೆಟ್ಟಿಯು, ಮೃತಪಟ್ಟ ರುದ್ರಪ್ಪಶೆಟ್ಟಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಅರೇಹಳ್ಳಿ ಪೇಟೆ ಶಾಂತವೀರಪ್ಪಶೆಟ್ಟಿಯು, ಅರೇಹಳ್ಳಿ ವಾಸಸ್ಥನಾಗಿ ಮೃತಪಟ್ಟ ರುದ್ರಶೆಟ್ಟಿ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಶಾಂತವೀರಪ್ಪಶೆಟ್ಟಿಯ ಅರ್ಜಿಯನ್ನು 1884ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುದ್ರಶೆಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1883ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 35.

ದಿವಾಳಿಯಾದ ಡಿಕ್ರಿ ದೇಣೇದಾರ ಚಿಕ್ಕಮಗಳೂರು ತಾಲ್ಲೂಕು ಕನಾನಾಯಕನಹಳ್ಳಿ ಪಟೇಲ್ಕಲ್ಲೇಗೌಡನ ವಿಷಯದಲ್ಲಿ—

ಈ ವಿಷಯವು ಸಬಾರ್ಡಿನೇಟ್ ಜಡ್ಜ್‌ರ ಬಿ. ತಿರುಮಲಾಚಾರ್ಯರವರೆ ರೂಬರೂ ದಿವಾಳಿಯಾದವನ ಸಮಕ್ಷಮದಲ್ಲಿಯೂ ಮತ್ತು ದಿವಾಳಿದಾರನ ಲೇಣೇದಾರರಾದ 1ನೇ ಶ್ರೀಂಗೇರಿ ರಾಮಂಣ, 2ನೇ ನಂಜುಂಡಯ್ಯನ ಪ್ಲೀಡರ್ ರಾಮಸ್ವಾಮಯ್ಯಂಗಾರ್, 3ನೇ ಕಳಸಾಪುರದ ಗೋಪಾಲಯ್ಯ, 4ನೇ ವಾದಿ ಕನಕಶೆಟ್ಟಿ ಇವರ ಯದುರಾಗಿಯೂ ದರ್ಯಾಫ್ತಿ ಮಾಡಲ್ಪಟ್ಟಿತು.

ಮತ್ತು ಸ್ರ 1884ನೇ ಇಸವಿ ಮಾರ್ಚೀ 18ನೇ ತಾರೀಖಿನ ಬಾಬತು ರಿಸೀವರಾದ ಈ ಕೋರ್ಟು ನಾಜರ್ ಮತ್ತು ಹೆಡ್ ಮುನಷಿ ನಂಜಪ್ಪನವರ ಸರಟಿಫಿಕೇಟ್ ಓದಲಾಯಿತು, ಇದೇ ವಿಷಯದಲ್ಲಿ ಸ್ರ 1883ನೇ ಇಸವಿ ಜೂರ್ 29ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟೀಯಲ್ಲಿ ಕಂಡ ಯಾವ ಸಾಲಗಳಿಗೂ ಣರ್ಜ ದಿವಾಳಿಯಾದವನ್ನ ಯಲ್ಲಾ ಜವಾಬುದಾರಿಯಿಂದಲೂ, ನಿಖಾಲಸ್ ಮಾಡಿರುವದಲ್ಲದೆ ಆ ಬಗ್ಯೆ ಸದರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಕೆಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಇದೆ.

1883ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 61.

ದಿವಾಳಿಯಾದ ಡಿಕ್ರಿ ದೇಣೇದಾರ ಪ್ರತಿವಾದಿ ಚಿಕ್ಕಮಗಳೂರಲ್ಲಿ ಯಿರುವ ನುಲ್ಲುರಿರಾಯನ ವಿಷಯದಲ್ಲಿ—

ಈ ವಿಷಯವು ಸಬಾರ್ಡಿನೇಟ್ ಜಡ್ಜ್‌ರ ಬಿ. ತಿರುಮಲಾಚಾರ್ಯರ ರೂಬರೂ ದಿವಾಳಿಯಾದವನ ಸಮಕ್ಷಮದಲ್ಲಿಯೂ ಮತ್ತು ದಿವಾಳಿದಾರನ ಲೇಣೇದಾರರಾದ 1ನೇ ಬಾಳಾಜಿರಾವ್, 2ನೇ ವೀರೇಗೌಡ, 3ನೇ ಚನ್ನಯ್ಯ, 4ನೇ ಲಕ್ಷ್ಮೀನಾರಣಪ್ಪನ ಪ್ಲೀಡರ್ ಗುಂಡಪ್ಪ ಯಿವರ ಯದುರಾಗಿಯೂ ದರ್ಯಾಫ್ತಿ ಮಾಡಲ್ಪಟ್ಟಿತು.

ಮತ್ತು ಸ್ರ 1884ನೇ ಇಸವಿ ಮಾರ್ಚೀ 18ನೇ ತಾರೀಖಿನ ಬಾಬತು ರಿಸೀವರಾದ ಕೋರ್ಟು ನಾಜರ್ ಹೆಡ್ ಮುನಸಿ ನಂಜಪ್ಪ ನವರ ಸರಟಿಫಿಕೇಟ್ ಓದಲಾಯಿತು. ಇದೇ ವಿಷಯದಲ್ಲಿ ಸ್ರ 1883ನೇ ಇಸವಿ ಸೆಪ್ಟಂಬರ್ 3ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ವೇರಿಗೆ ಪಟ್ಟೀಯಲ್ಲಿ ಕಂಡ ಯಾವ ಸಾಲಗಾರರಿಗೂ ಐರ್ಜ ದಿವಾಳಿಯಾದವನ್ನ ಯಾಲ್ಲಾ ಜವಾಬುದಾರಿಯಿಂದಲೂ ನಿ ಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಸೇಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1884ನೇ ಇಸವಿ ಮಾರ್ಚೀ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಹನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ.

ತಾರೀಖು 26ನೇ ಮಾರ್ಚೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೂಡಿಗೆರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅವನ್ನ ವಾಪಸು ತೆಗದುಕೊಳ್ಳಬೇಕು. ತಪ್ಪಿದರೆ ಸ್ರ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ, ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಾರ ತಾರೀಖು.	ದಸ್ತಾವೇಜನ್ನು ಬರಸಿ ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
73 / 1881—82	15—2—82.	15—2—82	ಈರಮ್ಮ ಹೆಗ್ಗಡತಿ ನಿರ್ವಾಣಿ ಗಾಡನ ಪೆಂಡತಿ	ಗೊಣೀಬೀಡು ತಿಮ್ಮಶಟ್ಟಿ	95—12—0ಗೆ ತನ್ನ ಬಾಬತು 34ನೇ ನಂಬರ್ ಹುಲ್ಲು ಮನೇ ಬೀಡು ಮಾಡಿರುವದಾಗಿ.

ಮಹಮ್ಮದ್‌ಅಲ್ಲಿ,
ಫಾರ್ ರಿಜಿಸ್ಟ್ರಾರ್.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧವಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಸ್ಡ್ ಅಲ್ಲದ ಫ್ಯಾಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು, ಕಲ್ಕತ್ತೆ ಬಿ॥ ಸೀಬ್‌ಪೋರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡ್ನ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡ್ನ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ ಮತ್ತು ನೇಟಿವ್ ಡಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ ಆಗ್ತದೆ.

Mysore Government Press, Bangalore.—1884.